**OS.No.**7/2021
**ಡಿ ಡಬ್ಲ್ಯೂ:1**

**ದಿಃ 12.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಚ್ ಜೆ ವಕೀಲರಿಂದ**

ನನ್ನ ಮದುವೆ 2000 ರಲ್ಲಿ ಆಗಿರುತ್ತದೆ. ಆಗ ನನ್ನ ತಂದೆಯೇ ನಿಂತು ಮದುವೆ ಮಾಡಿರುತ್ತಾರೆ ಎಂದರೆ ಸರಿ. ನಾನು 2001 ರಲ್ಲಿ ನನ ತಂದೆಯ ವಿರುದ್ದ ದಾವೆ ದಾಖಲಿಸಿದ್ದೆ. ನಾನು ದಾಖಲಿಸಿದ ದಾವೆಯಲ್ಲಿ ನಾನು, ನನ್ನ ಸಹೋದರ ಮತ್ತು ನನ್ನ ತಂದೆ ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿ. 2017-18 ರಲ್ಲಿ ನನ್ನ ತಂದೆಯವರಿಗೆ ಆರೋಗ್ಯ ಸರಿ ಇರಲಿಲ್ಲ ಎನ್ನುವುದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ದಾಖಲೆ ಇಲ್ಲ ಆದರೆ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈಗ ತೋರಿಸಿದ ಭಾವಚಿತ್ರದಲ್ಲಿ ನನ್ನ ತಂದೆ ಮತ್ತು ನನ್ನ ಅಣ್ಣನ ಮಗಳು ಇರುತ್ತಾರೆ. ಸದರಿ ಪೋಟೋವನ್ನು ನಿಪಿ.23 ಎಂದು ಗುರುತಿಸಲಾಯಿತು. ನಿಪಿ.23 ಭಾವಚಿತ್ರವು 2009 ರಲ್ಲಿ ನನ್ನ ಅಣ್ಣನ ಮಗಳ ಹುಟ್ಟಿದಹಟ್ಟಿ ಕಾರ್ಯಕ್ರಮದ್ದು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ಪೋಟೋದಲ್ಲಿ ನನ್ನ ತಂದೆ ಮತ್ತು ನನ್ನ ಅಣ್ಣನ ಮಗಳು ಮೇಘನ ಇರುತ್ತಾರೆ. ಸದರಿ ಪೋಟೋವನ್ನು ನಿಪಿ.24 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ 2013 ರಲ್ಲಿ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ಪೋಟೋದಲ್ಲಿ ನನ್ನ ತಂದೆ ಮತ್ತು ನನ್ನ ಅಣ್ಣನ ಮಗಳು ಮಧು ಇರುತ್ತಾರೆ. ಸದರಿ ಪೋಟೋವನ್ನು ನಿಪಿ.25 ಎಂದು ಗುರುತಿಸಲಾಯಿತು. ನಿಪಿ.25 ಪೋಟೋ ನನ್ನ ಅಣ್ಣನ ಮಗಳ ಮಧು ಆರತಿಯಲ್ಲಿ ತೆಗೆದ ಪೋಟೋ ಬಗ್ಗೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ಪೋಟೋದಲ್ಲಿ ನನ್ನ ತಂದೆ ಮತ್ತು ನನ್ನ ಅಣ್ಣನ ಮಗಳು ಮಧು ಇರುತ್ತಾರೆ. ಸದರಿ ಪೋಟೋವನ್ನು ನಿಪಿ.26 ಎಂದು ಗುರುತಿಸಲಾಯಿತು. ನಿಪಿ.23 ರಿಂದ 26 ಪೋಟೋಗಳಲ್ಲಿ ನನ್ನ ತಂದೆ ಆರೋಗ್ಯವಾಗಿ ಇರುತ್ತಾರೆ ಎಂದರೆ ಸಾಕ್ಷಿಯು ಚಿಕಿತ್ಸೆ ಪಡೆಯುವ ಕಾರಣ ಚೆನ್ನಾಗಿ ಇರುತ್ತಾರೆ ಎಂದು ನುಡಿಯುತ್ತಾರೆ.

ಕೌಂಟರ್ ಕ್ಲೇಮ್ ನ ಆಸ್ತಿಗಳಲ್ಲಿ ನನ್ನ ತಂದೆ ಸ್ವಾಧೀನದಲ್ಲಿ ಇದ್ದು ಈಗಲೂ ಸಹ ಅವರ ಹೆಸರಿನಲ್ಲಿ ಇರುತ್ತವೆ. ಸದರಿ ಆಸ್ತಿಗಳನ್ನು ನಾವು ರಾಜಿ ಮಾಡಿಕೊಳ್ಳುವ ಪೂರ್ವದಲ್ಲಿಯೇ ಮಹೇಶ್ವರಪ್ಪ ಎನ್ನುವವರಿಗೆ ಮಾರಾಟ ಆಗಿದ್ದವು ಎಂದರೆ ಸರಿಯಲ್ಲ. ಮಾರಾಟ ಆದ ದಿನದಿಂದ ಇಲ್ಲಿಯವರೆಗೂ ಮಹೇಶ್ವರಪ್ಪರವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಈಗ ಮಹೇಶ್ವರಪ್ಪ ಜೀವಂತ ಇಲ್ಲ. ಮಹೇಶ್ವರಪ್ಪನ ಮಗನ ಹೆಸರು ಲಕ್ಷ್ಮಣ ಇರಬಹುದು. ಸದರಿ ಆಸ್ತಿಗಳಲ್ಲಿ ಲಕ್ಷ್ಮಣರವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಕುಟುಂಬದ ಅವಶ್ಯಕತೆಗಾಗಿ

ಅವುಗಳನ್ನು ಮಾರಾಟ ಮಾಡಿರುವುದರಿಂದ ಆ ಆಸ್ತಿಗಳಲ್ಲಿ ಮಹೇಶ್ವರಪ್ಪರವರ ಮಗ ಲಕ್ಷ್ಮಣರವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಿಡಿ.4 ಕ್ಕೆ ಸಂಬಂಧಿಸಿದಂತೆ ಇರುವ ಗಂಗಮ್ಮ ಕೋಂ ಸೋಮಶೇಖರರವರನ್ನು ಕೌಂಟರ್ ಕ್ಲೇಮ್ ನಲ್ಲಿ ಪಾರ್ಟಿ ಮಾಡಿರುತ್ತೇನೆ. ನಿಡಿ.17 ಕ್ಕೆ ಸಂಬಂಧಿಸಿದಂತೆ ಕಲಿವೀರಪ್ಪರವರನ್ನು ಪಾರ್ಟಿ ಮಾಡಿರುತ್ತೇನೆ. ಸ.ನಂ. 15/3 ನ್ನು ಮಾರಾಟ ಮಾಡುವ ಪೂರ್ವದಲ್ಲಿ ಅದಲು ಬದಲು ಪತ್ರ ಆಗಿತ್ತು ಎಂದರೆ ಸರಿಯಲ್ಲ. ನಿಡಿ.3 ಹಕ್ಕು ಬದಲಾವಣೆ ಆದ ಬಗ್ಗೆ ಇದ್ದು ಸಾಕ್ಷಿಯು ಪೋರ್ಜರಿ ಆದ ನಂತರ ಆ ರೀತಿ ಹಕ್ಕು ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಹಕ್ಕು ಬದಲಾವಣೆ ಆದ ನಂತರ ಮಾರಾಟಕ್ಕೆ ಪಡೆದವರನ್ನು ಕೌಂಟರ್ ಕ್ಲೇಮ್ ನಲ್ಲಿ ಪಕ್ಷಗಾರರನ್ನಾಗಿ ಮಾಡದೇ ಇದ್ದರು ಸಹ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೌಂಟರ್ ಕ್ಲೇಮ್ ಗೆ ವ್ಯಾಜ್ಯ ಕಾರಣ ಯಾವಾಗ ಉಂಟಾಯಿತು ಎಂದು ನನಗೆ ಗೊತ್ತಿಲ್ಲ ಆದರೆ 2021 ಇರಬಹುದು. ಕೌಂಟರ್ ಕ್ಲೇಮ್ ನ ಪ್ಯಾರಾ 7 ರಲ್ಲಿ ವ್ಯಾಜ್ಯ ಕಾರಣ ತಪ್ಪಾಗಿ ಟೈಪ್ ಆಗಿರುತ್ತದೆ. ಆ ಬಗ್ಗೆ ತಿದ್ದುಪಡಿಯನ್ನು ಮಾಡಿರಬಹುದು. ನನ್ನ ಕೌಂಟರ್ ಕ್ಲೇಮ್ ನಲ್ಲಿ ಎಲ್ಲರಿಗೂ ಸಹ ಕೌಂಟರ್ ಕ್ಲೇಮ್ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದು ನನ್ನ ತಂದೆಯವರು ಇದ್ದಾಗ ಕೇಳಿದ್ದೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಕೌಂಟರ್ ಕ್ಲೇಮ್ ಆಸ್ತಿಗಳನ್ನು ನನ್ನ ತಂದೆಯವರು ಹಾಗೆಯೇ ಬಿಟ್ಟು ಹೋಗಿರುತ್ತಾರೆ ಎನ್ನುವುದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕೌಂಟರ್ ಕ್ಲೇಮ್ ನಲ್ಲಿ ಕೇಳಿರುವಂತೆ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹ ಅಲ್ಲ ಎಂದರೆ ಸರಿಯಲ್ಲ. ಕೌಂಟರ್ ಕ್ಲೇಮ್ ನ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಕೊರ್ಟ್ ರಾಜಿ ಮೂಲಕ ಅವರ ಹೆಸರಿಗೆ ಬಂದ ಆಸ್ತಿಗಳನ್ನು ಮರಣ ಶಾಸನ ಮತ್ತು ದಾನಪತ್ರದ ಮೂಲಕ ವಿಲೇವಾರಿ ಮಾಡಿರುವ ಕಾರಣ ನನಗೆ ಕೌಂಟರ್ ಕ್ಲೇಮ್ ಆಸ್ತಿಗಳಲ್ಲಿ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ನನಗೆ ಸ್ವಲ್ಪ ಮೊದಲು ಸಕ್ಕರೆ ಖಾಯಿಲೆ ಇದ್ದು ಈಗ ಹುಷಾರಾಗಿರುತ್ತೇನೆ. ನನ್ನ ತಂದೆಯವರಿಗೂ ಸಹ ಸ್ವಲ್ಪ ಸಕ್ಕರೆ ಖಾಯಿಲೆಯಾಗಿ ನಂತರ ಹುಷಾರಾಗಿ ನನ್ನ ಅಣ್ಣನ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳಿಗೂ ಮತ್ತು ಕೌಂಟರ್ ಕ್ಲೇಮ್ ನ ಆಸ್ತಿಗಳಿಗೂ ಸಾಕಷ್ಟು ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳಲ್ಲಿ ನನ್ನ ಅಣ್ಣನೇ ಮೊದಲಿನಿಂದಲೂ ಸ್ವಾಧೀನದಲ್ಲಿ ಇರುತ್ತಾರೆ. ನನ್ನ ಅಣ್ಣ ಆ ಆಸ್ತಿಗಳಲ್ಲಿ ಸ್ವಾಧೀನದಲ್ಲಿ ಇರುವುದರಿದ ಮತ್ತು ನನ್ನ ತಂದೆಯವರು ಅಣ್ಣನ

ಜೊತೆ ವಾಸವಿರುವ ಕಾರಣ ಆ ಪ್ರೀತಿ ವಿಶ್ವಾಸದಿಂದ ಅವರ ಮೊಮ್ಮಕ್ಕಳ ಹೆಸರಿಗೆ ದಾನ ಪತ್ರ ಮತ್ತು ಮರಣ ಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯ ಸ್ವಾಧೀನಕ್ಕೆ ನಾವು ಅಡ್ಡಿಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.